ಶ್ರೀ ಬಿ.ಎಸ್.ಯಡಿಯೂರಪ್ಪ: ಬೇಡಿಕೆಯ ಮೇಲೆ ಚರ್ಚೆ ಪ್ರಾರಂಭ ಮಾಡಿ 10–15 ನಿಮಿಷ ಮಾತನಾಡಲಿ. ಮತ್ತೆ ನಾಳೆ ದಿವಸ ಬೇಡಿಕೆಯ ಮೇಲಿನ ಚರ್ಚೆಯನ್ನು ಮುಂದುವರಿಸುತ್ತೇನೆ. ಈಗ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪ ಮಾಡುವುದಕ್ಕೆ ಬಸವರಾಜ್‌ರವರಿಗೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಅವರಿಗೆ ನಾಳೆದಿವಸ ಅವಕಾಶ ಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಈಗಾಗಲೇ ಅವರು ತಮಗೆ ಪತ್ರ ಕೊಟ್ಟಿದ್ದಾರೆ.

ಅಧ್ಯಕ್ಷರು: ಪತ್ರ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು ಇವತ್ತೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು: ಆಯಿತು. ಮಾನ್ಯ ಬಸವರಾಜ್‌ರವರೆ, ತಾವು ಬೇಗ ಮಾತನಾಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ತಾವು ಹೇಳತಕ್ಕಂಥ ವಿಷಯವನ್ನು ಶಾರ್ಟ್ ಆಗಿ ಹೇಳಿ.

ವಿಷಯ:–

ಶ್ರೀ ಎ.ಎಸ್.ಬಸವರಾಜು(ಅರಸೀಕೆರೆ): ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ನನಗೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಇವತ್ತಿನ ದಿವಸ ಅರಸೀಕೆರೆ ತಾಲ್ಲೂಕಿನಲ್ಲಿ ಕೆಪಿಟಿಸಿಎಲ್ ಕಛೇರಿಯನ್ನು ಮುತ್ತಿಗೆ ಹಾಕಿ ಬೀಗ ಮುದ್ರೆ ಮಾಡಿರತಕ್ಕಂಥದ್ದು ಸುಮಾರು 3–4 ಸಾವಿರ ಜನ , ಕಾರಣ ವೇನೆಂದರೆ ಒಂದನೇ ತಾರೀಖು ಬಹುಶಃ ಕೂಡ ನಾನು ಅರಸೀಕೆರೆಯಲ್ಲಿದ್ದೆ, ಆಗ ನಾನು ಸಮುದಾಯ ಭವನವನ್ನು ಉದ್ಘಾಟನೆ ಮಾಡಿ ಬರಬೇಕಾದರೆ ಕೆಇಬಿ ಆಫೀಸಿನಲ್ಲಿ ಸಾಕಷ್ಟು ಗಂಡಸಿ ಕ್ಷೇತ್ರದ ಜನ ಹೊಸದಾಗಿ ಬಂದಿರತಕ್ಕಂಥ ಟಿಸಿಗಳನ್ನು ತುಂಬುತ್ತಿದ್ದರು. ಆದರೆ ನನ್ನ ತಾಲ್ಲೂಕಿನಲ್ಲಿ 3–4 ತಿಂಗಳಾದರೂ ಟಿಸಿ ಇಲ್ಲ. ನಾವು ಕತ್ತಲಲ್ಲಿದ್ದೇವೆ, ನೀರು ಇಲ್ಲ, ಟಿಸಿ ಕೇಳಿದರೆ ಬಂದಿಲ್ಲ ಬಂದಿಲ್ಲವೆಂದು ಹೇಳತಕ್ಕಂಥದ್ದು, ರೀವೈಂಡಿಂಗ್ ಸರಿಯಾಗಿ ಆಗುತ್ತಿಲ್ಲ. ಆ

ದೃಷ್ಟಿಯಿಂದ ಮಂಗಳೂರಿನಿಂದ ಎಂಡಿ ಯವರು ಬಂದಾಗ ನಾವು ಹೊಸ ಟಿಸಿ ಯನ್ನು ಕೊಡಿ ಹಳೆಯ ಟಿಸಿಗಳು ಕುಲಗೆಟ್ಟು ಹೋಗಿವೆ, ಎಷ್ಟು ರಿಪೇರಿ ಮಾಡಿದರೂ ಕೂಡ ಸಾರ್ಥಕವಾಗು ವುದಿಲ್ಲವೆಂದಾಗ ಅವರು 50 ಟಿಸಿಗಳನ್ನು ಕೊಡುತ್ತೇವೆಂದು ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಅದೇ ರೀತಿ ಶಿವಮೊಗ್ಗಕ್ಕೆ 30 ಟಿಸಿಗಳನ್ನು ಕಳುಹಿಸಿದರು. ಚನ್ನರಾಯಪಟ್ಟಣಕ್ಕೆ 15, ಅರಸೀಕೆರೆಗೆ15 ಟಿಸಿ, ಈ ಟಿಸಿಯನ್ನು ಕೊಟ್ಟಾಗ ಸೀನಿಯಾರಿಟಿ ಪ್ರಕಾರ ಕೊಡಬೇಕಾಗಿದೆ. ಅಲ್ಲಿ ಏನು ತೋಳ್ಬಲ ಇದೆ ಎಂದು ಗಂಡಸಿಯ ಒಬ್ಬ ಜಿಲ್ಲಾ ಪಂಚಾಯಿತಿಯ ಸದಸ್ಯ ಲಾರಿಗಳನ್ನು ತೆಗೆದುಕೊಂಡು ಬಂದು ಏಕಾಏಕಿ ತುಂಬುತ್ತಿದ್ದರು. ಆಗ ನನಗೆ ಗೊತ್ತಾಗಿ ನಾನು ಕೂಡ ಹೋದಾಗ ನೀವು ಸದನದಲ್ಲಿ ಮಾತನಾಡಿ, ಬೇಕಾದರೆ ಟಿಸಿ ತೆಗೆದುಕೊಂಡು ಬನ್ನಿ, ಈ ಟಿಸಿಗಳನ್ನು ನಾನು ತಂದಿದ್ದೇನೆ. ಆ ಕೆಪಿಟಿಸಿಎಲ್ ಕಛೇರಿಯಲ್ಲಿ ಇಬ್ಬರು ಇಲ್ಲ. ಎಲ್ಲರಿಗೂ ಕೂಡ ನಾನು ಮೊಬೈಲ್ ಫೋನ್ ಮಾಡಿದೆ. ಎಲ್ಲಾ ಸ್ವಿಚ್ ಆಫ್, ಬಹುಶಃ ಅವರಿಗೆ ಹೇಳದೆ ತೆಗೆದುಕೊಂಡು ಹೋಗುತ್ತಾರೋ ಏನೋ ಗೊತ್ತಿಲ್ಲ. ಇಷ್ಟೆಲ್ಲಾ ಗಲಾಟೆಯನ್ನು ಮಾಡಿದರೂ ಕೂಡ ಶಾಸಕರಾದ ನಿಮಗೆ ತಾಕತ್ತಿದ್ದರೆ ಸದನದಲ್ಲಿ ಮಾತನಾಡಿ ತೆಗೆದುಕೊಂಡು ಬನ್ನಿ ಎಂದು ಹೇಳಿ ತುಂಬಿಕೊಂಡು ಹೋದರು. ಅದನ್ನು ನಾನು ಪತ್ರಕರ್ತರ ಹತ್ತಿರ ಹೇಳಿದಾಗ, ಅವರು ಹೇಳಿದರು, ಹೇಳುವವರು ಕೇಳುವವರು ಇಲ್ಲದಿರುವ ಅರಸೀಕೆರೆ ಚೆಸ್ಕಾಂ ಕಛೇರಿ ಎಂದು 2ನೇ ತಾರಿಖಿನ ಪತ್ರಿಕೆಯಲ್ಲಿ ಬಂತು. ಆಗ ಅಲ್ಲಿರತಕ್ಕಂಥ ಅಧಿಕಾರಿಗಳೆಲ್ಲರೂ ಬೆಳಗ್ಗೆ ಬಂದರು. ಅವರು ನಿಸ್ಸಹಾಯಕವಾಗಿ ನನ್ನಿಂದ ಏನು ಮಾಡುವುದಕ್ಕಾಗುವುದಿಲ್ಲ. ದೌರ್ಜನ್ಯದಿಂದ ತುಂಬಿಕೊಂಡು ಕಂಬ ಮತ್ತು ವೈರ್‌ಗಳನ್ನು ತೆಗೆದುಕೊಂಡು ಹೋಗುತ್ತಾರೆ, ಏನು ಮಾಡುವುದಕ್ಕಾಗು ವುದಿಲ್ಲ, ಟಿಸಿ ತೆಗೆದುಕೊಂಡು ಹೋಗುತ್ತಾರೆ. ಮಾನ್ಯ ರೇವಣ್ಣನವರ ಹೆಸರನ್ನು ಹೇಳಿಕೊಂಡು ತೆಗೆದುಕೊಂಡು ಹೋಗುವುದು ಈ ರೀತಿಯಾಗುತ್ತದೆಂದು ಅವರು ಹೇಳಿದರು. ಏಕೆಂದರೆ, ಮೊದಲು ಕೆಇಬಿ ಎಂದರೆ ಹತ್ತಿರಕ್ಕೆ ಹೋದಾಗ ಕರೆಂಟ್ ಸ್ಪರ್ಷವಾಗುತ್ತಿತ್ತು. ಇವತ್ತು ವೈರನ್ನು ಮುಟ್ಟಿದರೂ ಕೂಡ ಸ್ಪರ್ಷವಾಗತಕ್ಕಂಥದ್ದು ಇಲ್ಲವೇ ಇಲ್ಲ. ಆ ದೃಷ್ಟಿಯಿಂದ ನೀವು ನಿಷ್ಕ್ರೀಯರಾಗಿದ್ದೀರಾ ಗಂಟುಮೂಟೆ ಕಟ್ಟುಕೊಂಡು ಹೋಗಿ ಎಂದು ಕೇಳಿದೆ. ಆದರೂ ಕೂಡ ತುಂಬಾ ತೊಂದರೆ ಇದೆ, ನಮ್ಮ ಮಾತನ್ನೂ ಕೇಳುವುದಿಲ್ಲ. ಬಂದು ದೌರ್ಜನ್ಯದಿಂದ ಎತ್ತಿಕೊಂಡು ಹೋಗುತ್ತಾರೆ. ಆದರೆ ಸೀನಿಯಾರಿಟಿ

ಇಲ್ಲದೆ ಹೊತ್ತುಕೊಂಡು ಹೋಗಿರತಕ್ಕಂಥದ್ದು ಇವತ್ತಿನ ದಿವಸ ಜನ, ಅದರಲ್ಲಿ ನಮಗೂ ಕೂಡ ಬೇಕು ಎಂದು 2–3ಸಾವಿರ ಜನ ಇವತ್ತಿನ ದಿವಸ ರಸ್ತೆ ತಡೆಯನ್ನು ಮಾಡಿದ್ದಾರೆ. ಕೆಪಿಟಿಸಿಎಲ್‌ಗೆ ಬೀಗ ಮುದ್ರೆಯನ್ನು ಹಾಕಿದ್ದಾರೆ. ಗಲಾಟೆಯಾಗಿದೆ, ಬಹುಶಃ ಇದನ್ನು ಸೀನಿಯಾರಿಟಿ ಮುಖಾಂತರವೇ ಕೊಡಬೇಕು, ಯಾರು ಟಿಸಿಗಳನ್ನು ತೆಗೆದುಕೊಂಡು ಹೋಗಿದ್ದಾರೋ ಆ ವ್ಯಕ್ತಿಗಳು ವಾಪಸ್ಸು ಬಂದು ಅವುಗಳನ್ನು ಸೀನಿಯಾರಿಟಿ ಮುಖಾಂತರ ಕೊಡಬೇಕೆಂದು ನಾನು ಕಳಕಳಿಯಿಂದ ಸದನದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಮಾನ್ಯ ಬೃಹತ್, ಮಧ್ಯಮ ಕೈಗಾರಿಕೆ ಸಚಿವರು): ಮಾನ್ಯ ಅಧ್ಯಕ್ಷರೆ, ಅರಸೀಕೆರೆ ಕ್ಷೇತ್ರದ ಶಾಸಕರಾಗಿರತಕ್ಕಂಥ ಗೌರವಾನ್ವಿತ ಎ,ಎಸ್.ಬಸವರಾಜುರವರು ತಮ್ಮ ಮತಕ್ಷೇತ್ರದ ವ್ಯಾಪ್ತಿಯಲ್ಲಿ ವಿದ್ಯುತ್ ಟ್ರಾನ್ಸ್‌ಫಾರಂಗಳ ಕೊರತೆಯಿಂದ ಆಗಿರತಕ್ಕಂಥ ಪರಿಸ್ಥಿತಿಯ ಬಗ್ಗೆ ಸವಿಸ್ತಾರವಾಗಿ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಎರಡು ವಿಚಾರಗಳು ಅವರು ಹೇಳಿರತಕ್ಕಂಥದ್ದು ನಾನು ಒಪ್ಪಲಿಕ್ಕೆ ಸಾಧ್ಯವಿಲ್ಲ. ವೈರನ್ನು ಮುಟ್ಟಿದರೆ ಮುಂಚೆ ಕರೆಂಟ್ ಶಾಕ್ ಹೊಡೆಯುತ್ತಿತ್ತು. ಈಗ ಶ್ಯಾಕ್ ಹೊಡೆಯುವುದಿಲ್ಲ ವೆಂದು ಹೇಳುತ್ತಿದ್ದಾರೆ. ಹಾಗೆಂದು ನೀವು ಯವುದಾದರೂ ವೈರನ್ನು ಮುಟ್ಟು ವುದಕ್ಕೆ ಹೋಗಬೇಡಿ. ಕರೆಂಟ್ ಇದೆ, ವೋಲ್ಟೇಜ್ ಕಡಿಮೆ ಇರಬಹುದು ಅಷ್ಟೆ. ಆಮೇಲೆ ಮತ್ತೆ ಏನಾದರೂ ಅನಾಹುತವಾದರೆ ನಮಗೆಲ್ಲಾ ತೊಂದರೆ ಆಗುತ್ತದೆ. ದಯವಿಟ್ಟು ಅದನ್ನು ಮಾಡುವುದಕ್ಕೆ ಹೋಗಬೇಡಿ. ಮಾನ್ಯ ರೇವಣ್ಣನವರ ಹೆಸರನ್ನು ಹೇಳಿಕೊಂಡು ಟ್ರಾನ್ಸ್‌ಫಾರಂಗಳನ್ನು ಎತ್ತಿಕೊಂಡು ಹೋಗಿಬಿಡುತ್ತಾರೆ. ಎನ್ನುವುದಕ್ಕೆ ರೇವಣ್ಣನವರು ಕಾರಣಕರ್ತರಾಗಿರುವುದಿಲ್ಲ. ಸ್ವಾಭಾವಿಕವಾಗಿ ಅವರು ಜಿಲ್ಲಾ ಮಂತ್ರಿಗಳಾಗಿರುತ್ತಾರೆ. ಕೆಪಿಟಿಸಿಎಲ್ ಮಂತ್ರಿಗಳು ಇರುತ್ತಾರೆ. ಯಾರೋ ಬಂದು ನಾನು ರೇವಣ್ಣನವರ ಕಡೆಯಿಂದ ಬಂದಿದ್ದೇನೆಂದು ಹೇಳಿರಬಹುದು. ಆದ್ದರಿಂದ ರೇವಣ್ಣನವರು ಇದಕ್ಕೆ ಕಾರಣಕರ್ತರೆಂದು ಹೇಳುವುದಕ್ಕೆ ಬರುವುದಿಲ್ಲವೆಂದು ಎರಡು ವಿಚಾರಗಳ ಬಗ್ಗೆ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ತಾವು ಉಳಿದಿದ್ದನ್ನು ಏನು ಹೇಳಿದ್ದೀರಿ, ಇದು ವಾಸ್ತವಾಂಶ. ಟ್ರಾನ್ಸ್‌ಫಾರ್ಮರ್‌ಗಳ ಕೊರತೆ ಅನೇಕ ಕಡೆಗಳಲ್ಲಿ ಇರತಕ್ಕಂಥದ್ದು ನಿಜ. ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋದ ತಕ್ಷಣ ರಿಪೇರಿ ಮಾಡದೇ ಆಗಿರತಕ್ಕಂಥದ್ದು ಕೂಡ ನಿಜ. ಆದರೆ ಇರುವುದರಲ್ಲಿ ಹಾಸನ ಜಿಲ್ಲೆಯಲ್ಲಿ ಉತ್ತಮ ಎನ್ನುವುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ, ನಿಮ್ಮ ಮಂತ್ರಿಗಳು ಬಂದಿದ್ದಾರೆ.

ನನಗೆ ವಿಶ್ವಾಸ ಇದೆ. ಉಸ್ತುವಾರಿ ಮಂತ್ರಿಗಳು ಸಾಕಷ್ಟು ಮೆಟೀರಿಯಲ್ಸ್‌ಗಳನ್ನು ಕೊಟ್ಟಿರುತ್ತಾರೆ. ಆದರೂ ಕೂಡ ಇವತ್ತು ಬೀಗ ಮುದ್ರೆ ಹಾಕಿದ್ದಾರೆಂದು ವಿಶೇಷವಾಗಿ ಇವತ್ತು ಅರಸೀಕೆರೆ ತಾಲ್ಲೂಕು ಹಾಸನ ಜಿಲ್ಲೆಯಲ್ಲಿ ಡ್ರೈ ತಾಲ್ಲೂಕು ಅದು. ಅಂತಹ ದೊಡ್ಡ ಮಳೆ ಸಹಿತ ನಿಮಗೆ ಆಗುವುದಿಲ್ಲ. ಜೊತೆಗೆ ತೆಂಗಿನ ಮರ ಮತ್ತು ತೆಂಗಿನ ತೋಟಗಳು ಇರುವುದರಿಂದ ಬಹಳಷ್ಟು ತ್ರೀಫೇಸ್ ಕರೆಂಟ್ ನಿಮಗೆ ಬಹಳಷ್ಟು ಹೊತ್ತು ಬೇಕಾಗಬಹುದೆಂದು ನಮಗೆ ಗೊತ್ತಿದೆ. ನಾನು ಕೆಪಿಟಿಸಿಎಲ್‌ನ ಸಂಬಂಧಪಟ್ಟ ಈ ಬೆಸ್ಕಾಂನ ಅಧಿಕಾರಿಗಳು ಯಾರ್ಯಾರಿದ್ದಾರೆ ಅವರಿಗೆ ಮತ್ತು ಮಂತ್ರಿಗಳ ಕಾರ್ಯಾಲಯಕ್ಕೆ ಇವತ್ತು ತಿಳಿಸಿ ಟಿಸಿಗಳನ್ನು ಸೀಯಾರಿಟಿ ಮೇಲೆ ನಿಮಿಷದಲ್ಲಿ ಮುಗಿಸುತ್ತೇನೆ. ಯಾವುದೇ ಕಂಪನಿಗಳು ಆಗಿರಲಿ, ನಾವು ಸೀಯಾರಿಟಿ ಮೇಲೆ ಒಂದು ಲಿಸ್ಟ್‌ನ್ನು ಮಾಡುತ್ತೇವೆ. ತಾವು ಸಲಹೆಯನ್ನು ಏನು ಕೊಟ್ಟಿದ್ದೀರಾ? ಅದನ್ನು ಸರ್ಕಾರ ಒಪ್ಪಿಕೊಳ್ಳುತ್ತದೆ. ಸೀಯಾರಿಟಿ ಮೇಲೆಯೇ ಟ್ರಾನ್ಸ್‌ಫಾರ್ಮರ್‌ಗಳು ಕೊಡುವಂತೆ ಮಾಡೋಣ.

ಶ್ರೀ ಕೆ.ಆರ್.ರಮೇಶ್‌ಕುಮಾರ್(ಶ್ರೀನಿವಾಸಪುರ): ಮಾನ್ಯ ಅಧ್ಯಕ್ಷರೇ, ಬಹುಶಃ ಅವರ ಕ್ಷೇತ್ರದಲ್ಲಿ ಇದೆಯೋ ಇಲ್ಲವೋ ಸಾರ್ವತ್ರಿಕವಾಗಿ ಒಂದು ಸಮಸ್ಯೆ ಉದ್ಭವವಾಗಿದೆ. ಸುಟ್ಟುಹೋದ ಟ್ರಾನ್ಸ್‌ಫಾರ್ಮರ್‌ನ್ನು ಕಾಯಿಲ್ ಕಟ್ಟುವುದಕ್ಕೆ ಮತ್ತು ರಿಪೇರಿ ಮಾಡುವುದಕ್ಕೆ ಸ್ಥಳೀಯವಾಗಿ ಒಬ್ಬನಿಗೆ ಗುತ್ತಿಗೆ ಕೊಡುತ್ತಾರೆ. ಅವನ ಮತ್ತು ಕೆಪಿಟಿಸಿಎಲ್ ಆಫೀಸರ್ಸ್‌ಗಳ ಮಧ್ಯ ಒಪ್ಪಂದ ಇವತ್ತು ತೆಗೆದುಕೊಂಡು ಹೋದ ಟ್ರಾನ್ಸ್‌ಫಾರ್ಮರ್ ಪುನಃ ನಾಲ್ಕು ದಿವಸಕ್ಕೆ ವಾಪಸ್ಸು ರಿಪೇರಿಗೆ ಬರುತ್ತದೆ. ರಿಪೇರಿ ಮಾಡಿ ಬಂದರೆ ನಾಲ್ಕು ದಿವಸದ ಮೇಲೆ ಅದು ಇರಬಾರದು. ಪುನಃ ಐದನೇ ದಿವಸಕ್ಕೆ ಅದು ಅಲ್ಲಿ ಇರಬೇಕು. ರೈತ ಆಲುಗಡ್ಡೆ, ಟೊಮಾಟೊ ಅಥವಾ ಕೋಸ್‌ನ್ನು ಬೆಳೆದಿರುತ್ತಾರೆ. ಆ ಇರುವ ನೀರನ್ನು ಅವನು ತೆಗೆದು ಕೊಳ್ಳಬೇಕೆಂದರೆ ಟ್ರಾನ್ಸ್‌ಫಾರ್ಮರ್ ಇಲ್ಲದಿದ್ದರೆ ಅವನು ಸತ್ತು ಹೋಗುತ್ತಾನೆ. ಅಲ್ಲಿ ಸಬ್‌ಡಿವಿಜನ್ ಹೋಗಿ ದುಡ್ಡನ್ನು ಕೊಡದಿದ್ದರೆ ಟ್ರಾನ್ಸಫಾರ್ಮರ್ ಕೊಡುವುದಿಲ್ಲ. ಒಂದೊಂದು ವಾರಕ್ಕೆ ದುಡ್ಡನ್ನು ಕೊಟ್ಟು ಟ್ರಾನ್ಸಫಾರ್ಮರ್ ತೆಗೆದುಕೊಂಡು ಹೋಗುವಂಥ ಪರಿಸ್ಥಿತಿ ಬಂದಿದೆ. ಕೆಪಿಟಿಸಿಎಲ್‌ನವರ ಪರಿಸ್ಥಿತಿ ಏನಾಗಿದೆ ಎಂದರೆ. ಈ ವರ್ಲ್ಡ್‌ಬ್ಯಾಂಕ್ ನವರು ಬಂದು ಡಿಸಿಪ್ಲೀನ್ ಮಾಡಿದ ಮೇಲೆ, they are autonomous so far

as their powers and privileges are concerned, but so far as responsibilities are concerned they have become totally irresponsible. ಇದು ನಿಮಗೆ ಬೇಕಾಗಿದ್ದರೆ ಶ್ರೀನಿವಾಸಪುರಕ್ಕೆ ಯಾರನ್ನಾದರೂ ಕಳುಹಿಸಿ ಕೊಡಿ ಅಥವಾ ನಾನು ಇಲ್ಲೇ ಇರುತ್ತೇನೆ, ಈ ಸದ್ಯಕ್ಕೆ ಕಳುಹಿಸಿ ಕೊಡಿ ರೈತರನ್ನು ಸೇರಿಸಿ ಯಾವ ರೈತರಿಗಾದರೂ ಈ ಪರಿಸ್ಥಿತಿಯನ್ನು ಕೇಳಿ 4 ರಿಂದ 5 ಸಾವಿರ ರೂ. ಗಳು ಕೊಡದಿದ್ದರೆ ಟ್ರಾನ್ಸ್‌ಫಾರ್ಮರ್ ಸಿಗುವುದಿಲ್ಲ. ಸಿಕ್ಕ ಟ್ರಾನ್ಸ್‌ಫಾರ್ಮರ್ ಒಂದು ವಾರ ಪೂರ್ತಿ ಇರುವುದಿಲ್ಲ. ನಾವು ಯಾರಿಗೆ ಹೇಳಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಎಲ್ಲಾ ಕಡೆ ಇದೆ ಪರಿಸ್ಥಿತಿ ಇದೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ನಾಲ್ಕು ವರ್ಷವಾಗಿದೆ, ಇದು ಐದನೇ ವರ್ಷ. ಇವತ್ತಿನವರೆಗೆ ಒಂದು ಮಳೆ ಹನಿಯನ್ನು ನಾವು ನೋಡಲಿಲ್ಲ. ಫಿಫ್ತ್ ಇಯರ್‌ಗೆ ನಾವು ಎಂಟರ್ ಆಗಿರುತ್ತೇವೆ. 800 ರಿಂದ 900 ಫೀಟ್ ಆಳಕ್ಕೆ ನೀರು ಹೋಗಿರುತ್ತದೆ.

ಶ್ರೀ ಜೆ.ಟಿ.ದೇವೇಗೌಡ: ನಮ್ಮಲ್ಲಿ ಈ ಪ್ರಾಬ್ಲಮ್ ಇರುವುದಿಲ್ಲ.

ಅಧ್ಯಕ್ಷರು: ಶೂನ್ಯವೇಳೆಯಲ್ಲಿ ಉತ್ತರವನ್ನು ಹೆಚ್ಚಿಗೆ ಹೇಳುವುದಕ್ಕಾಗುವುದಿಲ್ಲ ಆದ್ದರಿಂದ ವಿವರವನ್ನು ತರಿಸಿ ಕೊಡುತ್ತಾರೆ.

(ಗೊಂದಲ)

ಶ್ರೀ ಜೆ.ಟಿ.ದೇವೇಗೌಡ: ನಮ್ಮಲ್ಲಿ ಏನು ಪ್ರಾಬ್ಲಮ್ ಇಲ್ಲದಿರುವುದಿಲ್ಲ. ಲಂಚಗಿಂಚ ಕೂಡ ಏನು ಇಲ್ಲ. ನಮ್ಮಲ್ಲಿ ಟ್ರಾನ್ಸ್‌ಫಾರ್ಮರ್ ಹಾಕುತ್ತಾರೆ. ಅವರಿಲ್ಲ ಪ್ರಾಬ್ಲಮ್ ಇರಬಹುದು ಟ್ರಾನ್ಸ್‌ಫಾರ್ಮರ್‌ಗಳಿಗೆ ದುಡ್ಡು ಕೊಟ್ಟು ಹಾಕಿಸಬೇಕಾದ ಪರಿಸ್ಥಿತಿ ಇಲ್ಲ.

(ಗೊಂದಲ)

ಶ್ರೀ ಜೆ.ಟಿ.ದೇವೇಗೌಡ: ಕೆಇಬಿ ಮೊದಲಿಗಿಂತಲೂ ಉತ್ತಮವಾಗಿ ನಡೆಯುತ್ತಿದೆ. ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕುತ್ತಿದ್ದಾರೆ. ಆದ್ದರಿಂದ ಅದನ್ನು ಕೂಡ ಒಪ್ಪಿಕೊಳ್ಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಒಬ್ಬೊಬ್ಬರು ಮಾತನಾಡಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ದೇವೇಗೌಡರ ಕ್ಷೇತ್ರದಲ್ಲಿ ಸರಿಯಾಗಿದ್ದರೆ ಇಡೀ ರಾಜ್ಯದಲ್ಲಿ ಎಲ್ಲಾ ಕಡೆ ಸರಿಯಾಗಿದೆ ಎಂದು ತಿಳಿದುಕೊಳ್ಳಬಾರದು.

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಮಾನ್ಯ ಗೌರವಾನ್ವಿತ ಸದಸ್ಯರುಗಳು ಇದರ ಬಗ್ಗೆ ತಮ್ಮ ತಮ್ಮ ಕ್ಷೇತ್ರದ ಬಗ್ಗೆ ಇರುವ ಆತಂಕವನ್ನು ಸರ್ಕಾರ ಅರ್ಥಮಾಡಿಕೊಂಡಿದೆ. ಶ್ರೀ ಜಿ.ಟಿ. ದೇವೇಗೌಡರು ತಮ್ಮ ಕ್ಷೇತ್ರದ ಅನುಭವವನ್ನು ಹಂಚಿಕೊಂಡಿದ್ದಾರೆ ಅಷ್ಟೆ. ಆದ್ದರಿಂದ ಅದರ ಬಗ್ಗೆ ತಾವು ಯಾರು ಸಿಟ್ಟು ಮಾಡಿಕೊಳ್ಳತಕ್ಕಂಥ ಅವಶ್ಯಕತೆ ಇಲ್ಲ. ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಬೇಸಿಗೆಯಲ್ಲಿ ಸ್ವಲ್ಪ ಈ ಸಾರಿ ಕಳೆದ 12 ತಿಂಗಳುಗಳಲ್ಲಿ ಇಂಧನ ಇಲಾಖೆಯವರು ಒಳ್ಳೆಯ ಕೆಲಸವನ್ನು ಮಾಡಿ ಈ ಮೆಟೀರಿಯಲ್ಸ್‌ಗಳ ಸಪ್ಲೈಯನ್ನು ಪೋಲ್ಸ್ ಇರಬಹುದು. ವೈರ್ ಇರಬಹುದು. ಟ್ರಾನ್ಸ್‌ಫಾರ್ಮರ್‌ಗಳು ಇರಬಹುದು ಸಾಕಷ್ಟು ಇಂಪ್ರೊವ್‌ಮೆಂಟ್ ಆಗಿರತಕ್ಕಂಥದ್ದು ಇದು ವಾಸ್ತವಾಂಶ. ಇದನ್ನು ನಾನು ಶಬ್ದಗಳಿಂದ ಹೇಳುತ್ತಿರುವುದರಿಂದ ನಿಮಗೆ ನಂಬಿಕೆಯಾಗದಿರ ಬಹುದು. ಬೇಕಾದರೆ ನೀವು ಒಂದು ಪ್ರಶ್ನೆಯನ್ನು ಕೇಳಿ, ಯಾವ್ಯಾವ ಸಬ್ ಡಿವಿಜನ್‌ಗಳಿಗೆ ಎಷ್ಟೆಷ್ಟು ವೈರ್‌ಗಳನ್ನು ಕೊಟ್ಟಿದ್ದೀರಿ, ಎಷ್ಟು ಪೋಲ್‌ಗಳನ್ನು ಕೊಟ್ಟಿದ್ದೀರಿ, ಎಷ್ಟೆಷ್ಟು . ಟ್ರಾನ್ಸ್‌ಫಾರ್ಮರ್‌ಗಳನ್ನು ಕೊಟ್ಟಿದ್ದೀರೆನ್ನುವ ಬಗ್ಗೆ ಕೇಳಿದರೆ ಆ ಶಬ್ದಗಳಿಗಿಂತ ಅಂಕಿ ಸಂಖ್ಯೆಗಳು ಮಾತನಾಡುತ್ತವೆ. ಆದ್ದರಿಂದ ಪರಿಸ್ಥಿತಿ ಈ ಎರಡು-ಮೂರು ತಿಂಗಳಲ್ಲಿ ಸ್ವಲ್ಪ ಮಳೆ ತಡವಾಗಿದ್ದರಿಂದ ಡಿಮಾಂಡ್ಸ್ ಹೆಚ್ಚಾಗಿರುವುದರಿಂದಾಗಿ ಇದು ಇರತಕ್ಕಂಥ ಪರಿಸ್ಥಿತಿ. ಮಾನ್ಯ ಹಿರಿಯ ಸದಸ್ಯರಾಗಿರತಕ್ಕಂಥ ರಮೇಶ್‌ಕುಮಾರ್‌ರವರು ಒಂದು ಸಲಹೆ ಯನ್ನು ಕೊಟಿದ್ದಾರೆ. ಆ ಸಲಹೆಯನ್ನು ನಾವು ಖಂಡಿತವಾಗಿ ಪರಿಗಣಿಸು ತ್ತೇವೆ. ನಾನು ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇನೆ. ದೇವರ ದಯೆಯಿಂದ ಮಳೆ ಚೆನ್ನಾಗಿ ಆದರೆ,

ಈಗ ಎಲ್ಲಾ ಕಡೆ ಮಳೆ ಆಗುತ್ತಿದೆ. ಮಾನ್ಯ ಬಸವರಾಜುರವರೆ ಸರ್ಕಾರದ ಅದೃಷ್ಟ ಅರ್ಥಮಾಡಿಕೊಳ್ಳಬೇಕು. ಆಲಮಟ್ಟಿಗೆ ನೀರು ಬಂದಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: (ಮುಂದು) ಕೆಲವು ಕಡೆಗಳಲ್ಲಿ ಪ್ರವಾಹ ವಾಗಿದೆ. ಕಬಿನಿ ತುಂಬಿದೆ, ಸ್ವಲ್ಪ 15 ದಿವಸ ಮತ್ತು ಒಂದು ತಿಂಗಳು ತೊಂದರೆಯಾಗಿರಬಹುದು ನಿಜ. ಅದನ್ನು ನಾನು ಸಹ ಒಪ್ಪಿಕೊಳ್ಳುತ್ತೇನೆ. ಇದನ್ನು ಸರಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ಯಾರಿಗೂ ಕೂಡ ಆತಂಕ ಬೇಕಾಗಿಲ್ಲ. ನಿಜ ನೀವು ನಿಮ್ಮ ಕ್ಷೇತ್ರಗಳಿಗೆ ಹೋದಾಗ ಸ್ವಾಭಾವಿಕವಾಗಿ ರೈತರು ಬಂದು ಹೇಳುತ್ತಾರೆ, ನೀವು ಅವರ ಮಾತನ್ನು ಕೇಳಬೇಕಾಗುತ್ತದೆ. ಅಧಿಕಾರಿಗಳಿಗೆ ಹೇಳಬೇಕಾಗುತ್ತದೆ. ಈ ದಿನ ಅಧಿವೇಶನ ಮುಗಿದು ನಂತರ ಅಧಿಕಾರಿಗಳಿಗೆ ಕರೆದು ಸೂಚನೆಯನ್ನು ಕೊಡುತ್ತೇನೆ.

ಶ್ರೀ ಎ.ಎಸ್.ಬಸವರಾಜು: ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು: ಮಾನ್ಯ ಬಸವರಾಜುರವರೆ,...

ಶ್ರೀ ಎ.ಎಸ್.ಬಸವರಾಜು: ಎಲೆಕ್ಟಿಕ್ ಮೋಟಾರುಗಳು ರಿವೈಂಡಿಂಗ್ ಮಾಡಿದರೆ ಗ್ಯಾರಂಟಿ ಅದನ್ನು 6 ತಿಂಗಳಲ್ಲಿ ಕೊಡಬಹುದು.

ಅಧ್ಯಕ್ಷರು: ಆಯಿತು ಅವರು ಹೇಳುತ್ತಾರೆ ಬಿಡಿ. ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರೆ ತಾವು ಮಾತನಾಡುತ್ತೀರಾ?

ಶ್ರೀ ಎ.ಎಸ್.ಬಸವರಾಜು: ಒಂದು ಮೋಟಾರು ರಿವೈಂಡ್ ಆದರೆ 16,300 ರೂಪಾಯಿಗಳಾಗುತ್ತದೆ.

ಅಧ್ಯಕ್ಷರು: ಮಾನ್ಯ ಬಸವರಾಜುರವರೆ, ಆಯಿತು ತಾವು ಕುಳಿತುಕೊಳ್ಳಿ. ಅವರು ಇದರ ಬಗ್ಗೆ ಹೇಳುತ್ತಾರೆ.

ಶ್ರೀ ಎ.ಎಸ್.ಬಸವರಾಜು: ಅದರ ಬಗ್ಗೆ ತಾವು ಯೋಜನೆ ಮಾಡಬೇಕು. ಈಗ ನೀವು ಹೊಸ ಟಿಸಿಯನ್ನು ತೆಗೆದುಕೊಂಡು ಹೋಗಿರುವುದು. ಅದನ್ನು ವಾಪಸ್ಸು ತರಬೇಕು ಎಂದು ನಾನು ಸರ್ಕಾರದಲ್ಲಿ ಕೇಳುತ್ತಿದ್ದೇನೆ.

ಅಧ್ಯಕ್ಷರು: ಈಗ ಏನೆಂದರೆ, ಅವರು ಏನು ಮಾಡುತ್ತಿದ್ದಾರೆಂದು ಅರ್ಥವಾಗುವುದಿಲ್ಲ.

ಶ್ರೀ ಎ.ಎಸ್.ಬಸವರಾಜು: ಅದನ್ನು ಅರಸಿಕೆರೆ ಕೆಪಿಟಿಸಿಎಲ್‌ಗೆ

ಕೊಡಬೇಕು.

ಅಧ್ಯಕ್ಷರು: ಆಯಿತು, ಅವರು ಹೇಳಿದ್ದಾರೆ ತಾವು ಕುಳಿತುಕೊಳ್ಳಿ. ಮಾನ್ಯ ಕಾಗೇರಿಯವರೆ, ತಾವು ಭಾಷಣವನ್ನು ಪ್ರಾರಂಭ ಮಾಡಿ.

ಶ್ರೀ ಗೋವಿಂದ ಎಂ ಕಾರಜೋಳ: ಮಾನ್ಯ ಅಧ್ಯಕ್ಷರೆ, ಮಾನ್ಯ ಕಾಗೇರಿಯವರು ಪ್ರಸ್ತಾಪ ಮಾಡಲಿ, ಇವತ್ತು ಏನಾಗಿದೆ ಎಂದರೆ, 2005–06ನೇ ಸಾಲಿನ ಡಿಮ್ಯಾಂಡ್ ಮೇಲೆ ನಾಲ್ಕು ಪ್ರಮುಖವಾದ ಇಲಾಖೆಗಳನ್ನು ಇವತ್ತೇ ಕಲಾಪದಲ್ಲಿ ಹಾಕಿದ್ದಾರೆ. ಶಿಕ್ಷಣ ಇಲಾಖೆಯಲ್ಲಿ ಸುಮಾರು 3 ಸಾವಿರ ಕೋಟಿ ರೂಪಾಯಿಗಳು. . . . .

ಅಧ್ಯಕ್ಷರು: ಹೌದು. ಸ್ವಾಮಿ ಏನು ಮಾಡುವುದು ಹೇಳಿ. ಈಗ ಹೆಚ್ಚು ಕಡಿಮೆ 3 ದಿವಸ ಒಂದಲ್ಲ ಒಂದು ಕಾರಣಕ್ಕಾಗಿ ಮುಂದಕ್ಕೆ ಹೋಗಿದೆ. ಆದ್ದರಿಂದ ಇನ್ನೇನು ಮಾಡುವುದಕ್ಕಾಗುತ್ತದೆ.

ಶ್ರೀ ಗೋವಿಂದ ಎಂ ಕಾರಜೋಳ: ತಾವು ಹೆಚ್ಚಿನ ಸಮಯವನ್ನು ಕೊಟ್ಟು ಡೈಲಿ ಒಂದೊಂದು ಅದನ್ನು ಇಟ್ಟರೆ ಅನುಕೂಲವಾಗುತ್ತದೆ. ಇದು ಬಹಳ ಮಹತ್ವವಾದ ವಿಷಯವಾಗಿದೆ.

ಅಧ್ಯಕ್ಷರು: ಆಯಿತು. ಅದನ್ನು ಅಡ್ಜಸ್ಟ್ ಮಾಡೋಣ. ಇವತ್ತು ಏನು ಡಿಮಾಂಡ್ಸ್ ಇದೆ, ಇವತ್ತು ಕಲಾಪ ಹೆಚ್ಚು ಹೊತ್ತು ನಡೆಯಲಿ, ಎಲ್ಲಿಯವರೆವಿಗೆ ಹೋಗುತ್ತದೆ ಅಲ್ಲಿಯವರೆಗೆ ನಡೆಯಲಿ. ನಾಳೆ ಅಥವಾ ನಾಳಿದ್ದು ಇನ್ನು ಮುಗಿಸೋಣ. ನಂತರ ನಾಳೇ ಮತ್ತು ನಾಳಿದ್ದು ಇರುವುದನ್ನು ಅಡ್ಜಸ್ಟ್ ಮಾಡಿ ಎಷ್ಟೆಷ್ಟು ಗಂಟೆಗೆ ಇಲಾಖೆಯ ಬೇಡಿಕೆ ಅದನ್ನು ಪ್ರಾಮುಖ್ಯತೆಯ ಮೇಲೆ ಮಾಡೋಣ. ತಾವು ದಯಮಾಡಿ ಕುಳಿತುಕೊಳ್ಳಿ. ಈಗ ಮಾನ್ಯ ವಿಶ್ವೇಶ್ವರ ಹೆಗಡೆಯವರು ತಾವು ಮಾತನಾಡಿ. ಮಾನ್ಯ ಹೆಗಡೆಯವರು ತಾವು ಭಾಷಣ ಪ್ರಾರಂಭ ಮಾಡುವುದಕ್ಕೆ ಮುಂಚೆ ಒಂದು ಪ್ರಕಟಣೆ ಇದೆ. ಅದನ್ನು ಓದುತ್ತೇನೆ.

ಪ್ರ ಕ ಟ ಣೆ

ಕರ್ನಾಟಕ ವಿಧಾನಮಂಡಲದ ವತಿಯಿಂದ ದಿನಾಂಕ:22 ಮತ್ತು 23ನೇ ಜುಲೈ 2005ರಲ್ಲಿ ಶಾಸಕರ ದಿನಾಚರಣೆಯನ್ನು ನಡೆಸಲು ತೀರ್ಮಾನಿಸಲಾಗಿದೆ. ಈ ಸಂದರ್ಭದಲ್ಲಿ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯ ಕ್ರಮಗಳನ್ನು ಮಾನ್ಯ ಸದಸ್ಯರುಗಳಿಗಾಗಿ ಹಮ್ಮಿಕೊಳ್ಳಲಾಗಿದೆ. ಚಿನ್ನಸ್ವಾಮಿ ಕ್ರಿಕೆಟ್ ಕ್ರೀಡಾಂಗಣ ಹಾಗೂ